ಅಸಲು ದಾವಾ ಸಂಖ್ಯೆಃ 307-2016
ಪಿ. ಡಬ್ಲ್ಯೂ - **01**

**ದಿನಾಂಕಃ 05.12.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಸಿ.ಪಿ.ಎಂ. ವಕೀಲರಿಂದಃ**

ನಾನು ವಾದಿ ಸಂಖ್ಯೆಃ 1(A) ಮತ್ತು (B) ರವರ ಪೋಷಕನಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದೆ. ಅದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು, ಅದರಲ್ಲಿ ನನ್ನ ಸಹಿ ಇದೆ.

**ಮುಂದುವರೆದ ಮುಖ್ಯ ವಿಚಾರಣೆಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1) ದಿನಾಂಕಃ 14.9.2011 ರ ಕಂಡೀಷನ್ ಕ್ರಯ ಪತ್ರದ ಮೂಲ ಪ್ರತಿಯನ್ನು **ನಿ.ಪಿ.01** ಎಂದು, ಸದರಿ ಪತ್ರದಲ್ಲಿರುವ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.01(ಎ) ಯಿಂದ (ಡಿ)** ಎಂದು ಗುರುತಿಸಲಾಯಿತು. ಪತ್ರಕ್ಕೆ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿ.ಪಿ.01(ಇ) ಯಿಂದ (ಎಫ್)** ಪತ್ರ ಬರಹಗಾರರ ಸಹಿಯನ್ನು ನೋಡಿ ಗುರುತಿಸಲಾಗಿದ್ದು, **ನಿ.ಪಿ.01(ಜಿ) ಎಂದು,**

2) ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿಪತ್ರಿಕೆಯನ್ನು **ನಿ.ಪಿ.02** ಎಂದು,

3) ತಂಬಾಕು ಮಂಡಳಿಯಿಂದ ನೀಡಿದ Grower Ledger ನ್ನು **ನಿ.ಪಿ.03** ಎಂದು,

4) ವಕೀಲರ ಮೂಲಕ ಕಳುಹಿಸಿದ ಸೂಚನಾ ಪತ್ರವನ್ನು **ನಿ.ಪಿ.04** ಎಂದು,

5) ಜಾರಿಯಾಗದೆ ವಾಪಸ್ಸಾದ ಆರ್.ಪಿ.ಐ.ಡಿ. ಲಕೋಟೆಯನ್ನು **ನಿ.ಪಿ.05** ಎಂದು, ಈ ಸಂದರ್ಭದಲ್ಲಿ ಆರ್.ಪಿ.ಐ.ಡಿ. ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರೊಳಗಿರುವ ನೋಟೀಸಿನ ಪ್ರತಿಯನ್ನು **ನಿ.ಪಿ.05(ಎ)** ಎಂದು ಗುರುತಿಸಲಾಯಿತು.

6) ಅಂಚೆ ರಶೀದಿಯನ್ನು **ನಿ.ಪಿ.06** ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**